ಅಧ್ಯಕ್ಷರು ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು

ಅಧ್ಯಕ್ಷರು ಈಗ ಪ್ರಶ್ನೋತ್ತರಗಳು

2 ನೂತನ ಸಚಿವರ ಪರಿಚಯ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು, ನೂತನವಾಗಿ ಸಚಿವರಾದಂದ ಸನ್ಮಾನ್ಯ ಆಲಂಗೂರು ಶ್ರೀನಿವಾಸ್‌ರವರು, ಸನ್ಮಾನ್ಯ ಜಿ ಟಿ ದೇವೇಗೌಡರವರು ಹಾಗೂ ಸನ್ಮಾನ್ಯ ಮಹದೇವ ಪ್ರಸಾದ್‌ರವರು ನೂತನವಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಸದನಕ್ಕೆ ಬಂದಿದ್ದಾರೆ ಅವರ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಕೇಳುತ್ತಿದ್ದೇನೆ, ಮಹಿಳೆಯರಿಗೆ ಏಕೆ ಸಚಿವ ಸ್ಥಾನವನ್ನು ಕೊಡಲಿಲ್ಲ ಎಂದು ನಾನು ಕೇಳುತ್ತಿದ್ದೇನೆ ಮಹಿಳೆಯರ ಪರವಾಗಿ ಮಾತನಾಡತಕ್ಕಂಥ ಈ ಸರ್ಕಾರ, ಒಬ್ಬ ಮಹಿಳೆಯನ್ನಾದರೂ ಮಂತ್ರಿಯನ್ನಾಗಿ ಮಾಡಿದ್ದರೆ, ಅದು ನಿಜಕ್ಕೂ ಆದರ್ಶವಾಗುತ್ತಿತ್ತು, ಆಗ ಮಹಿಳಾ ಕುಲಕ್ಕೆ ಒಂದು ಒಳ್ಳೆಯ ಗಂಭೀರ ಇರುತ್ತಿತ್ತು ಆದರೆ ತಾವು ಮಹಿಳೆಯರನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೀರಿ ತಮ್ಮ ಪಕ್ಷಕ್ಕೆ ಮಹಿಳೆಯರ ಗುರುತನ್ನೇ ಇಟ್ಟುಕೊಂಡಿರತಕ್ಕಂಥವರು ತಾವು

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೇ ಈಗ ಪ್ರಶ್ನೋತ್ತರಕ್ಕೆ ಹೋಗೋಣ ಸದನ ಪ್ರಾರಂಭವಾಗಿ ಈಗಾಗಲೇ ಒಂದು ಗಂಟೆಯಾಯಿತು

ಶ್ರೀ ವಾಟಾಳ್ ನಾಗರಾಜ್ ಒಬ್ಬ ಮಹಿಳೆಗೂ ನೀವು ಅವಕಾಶ ಕೊಟ್ಟಿಲ್ಲ ಈ ರಾಜ್ಯದ ಮಹಿಳೆಯರು ಬೇಡವೇ? ಇದರಿಂದ ಮನಸ್ಸಿಗೆ ನೋವಾಗುತ್ತದೆ ಮಾನ್ಯ ಪ್ರಕಾಶ್‌ರವರೇ ಇದಕ್ಕೆ ತಾವು ಉತ್ತರವನ್ನು ಹೇಳಬೇಕು ಏಕೆ ಮಹಿಳೆಯರನ್ನು ತೆಗೆದುಕೊಳ್ಳಲಿಲ್ಲ? ಮಹಿಳೆಯರಿಗೆ ಏಕೆ ಅವಕಾಶ ಕೊಡಲಿಲ್ಲ? ಅದಕ್ಕೆ ಕಾರಣವೇನು? ಎನ್ನುವುದನ್ನು ನೀವು ಹೇಳಬೇಕು

ಅಧ್ಯಕ್ಷರು ಆಯಿತು, ಕುಳಿತುಕೊಳ್ಳಿ ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ ಈಗ ಪ್ರಶ್ನೋತ್ತರ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ನಾವು Adjournment Motion move ಮಾಡಿದ್ದೇವೆ ರಾಜ್ಯದಲ್ಲಿ ಭೀಕರವಾದ ಬರಗಾಲವಿದೆ, ಅತಿವೃಷ್ಟಿಯಿದೆ, ಅದನ್ನು ಮೊದಲು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ

ಅಧ್ಯಕ್ಷರು ಅದನ್ನು ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳೋಣ

ಶ್ರೀ ಆರ್ ವಿ ದೇಶಪಾಂಡೆ ಎಲ್ಲ ಕಲಾಪಗಳನ್ನು ಬಿಟ್ಟು Adjournment Motion ತೆಗೆದುಕೊಳ್ಳಬೇಕಾಗುತ್ತದೆ

ಅಧ್ಯಕ್ಷರು ಪ್ರಶ್ನೋತ್ತರವಾದ ಮೇಲೆ ಶೂನ್ಯವೇಳೆಯಲ್ಲಿ ತಾವು ಆ ವಿಷಯವನ್ನು ಪ್ರಸ್ತಾಪ ಮಾಡಿ, ನಾನು ನಿಮಗೆ ಆಗ ಅವಕಾಶ ಕೊಡುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ ಸಾಮಾನ್ಯವಾಗಿ ಏನು ಕಲಾಪವಿರುತ್ತದೆ, ಅದನ್ನು ಬಾಕಿ ಇಟ್ಟು Adjournment Motion ತೆಗೆದುಕೊಳ್ಳಲಾಗುತ್ತದೆ ಅದಕ್ಕೆ ಸರ್ಕಾರವೂ ಒಪ್ಪಿಕೊಳ್ಳಬಹುದು ರಾಜ್ಯದಲ್ಲಿ ಬಹಳ ಭೀಕರವಾದ ಬರಗಾಲವಿದೆ ರೈತರು ಕಷ್ಟದಲ್ಲಿದ್ದಾರೆ, ದನಕರುಗಳು ಕಷ್ಟದಲ್ಲಿವೆ

ಅಧ್ಯಕ್ಷರು ಅವುಗಳನ್ನೆಲ್ಲ consider ಮಾಡತಕ್ಕಂಥ ಪರಿಪಾಠ ಆಯಿತು, ನಂತರ ಅದಕ್ಕೆ ಅವಕಾಶ ಕೊಡುತ್ತೇನೆ ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ

3 ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮೊರಾರ್ಜಿ ವಸತಿ ಶಾಲೆಯನ್ನು ಪ್ರಾರಂಭಿಸುವುದು

31 (212) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸೊರಬ ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಮಂಜೂರಾದ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆಯೇ ,

ಆ) ಮೊರಾರ್ಜಿ ವಸತಿ ಶಾಲೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ,

ಇ) ವಿಳಂಬಕ್ಕೆ ಕಾರಣವೇನು ?